ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು 200 ಎಕರೆಗಳು.

ಶ್ರೀ ಕೆ. ಚಿಕ್ಕಲಿಂಗಯ್ಯ.—ಯಾವ ಗ್ರಾಮದವರಿಗೆ ಈ ಜಮೀನನ್ನು ಸಾಗುವಳಿಗೆ ಕೊಟ್ಟಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿಲ್ಲ.

ಶ್ರೀ ಕೆ. ಚಿಕ್ಕಲಿಂಗಯ್ಯ.—ಈ ಜಮೀನು ನಿಟ್ಟೂರು ಕೆರೆಗೆ ಸಂಬಂಧಪಟ್ಟಿರುವುದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಪ್ರಶ್ನೆಯಲ್ಲೇ ನಮೂದಾಗಿದೆ.

ಶ್ರೀ ಕೆ. ಚಿಕ್ಕಲಿಂಗಯ್ಯ.—ಈ ಕೆರೆ ಆಂಗಳವನ್ನು ಬೇರೆ ಗ್ರಾಮದವರಿಗೆ ಸಾಗುವಳಿಗೆ ಕೊಟ್ಟಿದೆಯೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು.

ಶ್ರೀ ಕೆ. ಚಿಕ್ಕಲಿಂಗಯ್ಯ.—ಈಗ ಯಾರಿಗೆ ಈ ಜಮೀನು ಸಾಗಿಗೆ ಕೊಟ್ಟಿದೆಯೋ ಅವರಿಗೆ ಪ್ರತಿಯೊಬ್ಬರಿಗೂ 70—80 ಎಕರೆಗಳಷ್ಟು ಬೇರೆ ಜಮೀನಿದೆಯೆಂದು ಹೇಳಿದರೆ ಒಪ್ಪುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಹಾಗೆ ಒಪ್ಪುವುದಕ್ಕಾಗುವುದಿಲ್ಲ. ತಮ್ಮ ಮಾತಿನಲ್ಲಿ ನಂಬಿಕೆಯಿದೆ. ಆದರೆ ತಕ್ಷಣ ಒಪ್ಪುವುದು ಕಷ್ಟ, ವಿಚಾರ ಮಾಡಬೇಕು.

ಶ್ರೀ ಕೆ. ಚಿಕ್ಕಲಿಂಗಯ್ಯ.—ಈ ಕೆರೆ ಅಂಗಳವನ್ನು ಸಾಗುವಳಿಗೆ ಕೊಡಕೂಡದೆಂದು ಜಮೀನಿಲ್ಲದವರೂ ಮತ್ತು ಅಚ್ಚುಕಟ್ಟುದಾರರೂ ಸ್ಪೇ ಆರ್ಡರನ್ನು ಕೇಳಿ ತಮ್ಮಲ್ಲಿ ಅಪೀಲು ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಜಮೀನನ್ನು ಪಡೆದಿರುವವರು '1942-43ರಲ್ಲಿ ಸಾಗುವಳಿಗೆ ಕೊಟ್ಟರು, ಅಲ್ಲಿಂದ ಸಾಗುಮಾಡುತ್ತಿರುವವರನ್ನು ತಪ್ಪಿಸಿದರೆ ಬಹಳ ಕಷ್ಟವಾಗುತ್ತದೆ' ಎಂದು ಅಪೀಲು ಮಾಡಿದ್ದಾರೆ.

ಶ್ರೀ ಕೆ. ಚಿಕ್ಕಲಿಂಗಯ್ಯ.—ಈ ಜಮೀನನ್ನು ಬೇರೆ ಗ್ರಾಮದವರಿಗೆ ಕೊಡಕೂಡದೆಂದೂ, ಅವರಿಗೆ ಜಿದ್ದಿದೆಯೆಂದೂ ಸ್ಪೇ ಆರ್ಡರು ಕೇಳಿ ಅಪೀಲು ಮಾಡಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಕೆ. ಚಿಕ್ಕಲಿಂಗಯ್ಯ.—ಆ ಅಪೀಲನ್ನು ನಿನ್ನೆಯ ದಿವಸಕ್ಕೆ, 8ನೆಯ ತಾರೀಖಿಗೆ ಪೋಸ್ಟ್ ಮಾಡಿರಲಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಹಳ ಕೇಸುಗಳಿವೆ, ಆದ್ದರಿಂದ ಅದು ಜ್ಞಾಪಕವಿಲ್ಲ.

ಶ್ರೀ ಕೆ. ಚಿಕ್ಕಲಿಂಗಯ್ಯ.—ನಿಟ್ಟೂರು ಕೇಸು ಒಂದು ತಮ್ಮಲ್ಲಿರುವುದು ಗಮನಕ್ಕೆ ಬಂದಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇರಬಹುದು ; ನೋಟೀಸ್ ಕೊಟ್ಟರೆ ಹೇಳಬಹುದು.

Feeder Channel from Periyapatna Doddakere to Kiranelli Doddakere.

Q.—379. **Sri S. M. MARIYAPPA** (Periyapatna).—

Will the Government be pleased to state :—

(*a*) whether any survey has been undertaken to construct a feeder channel from Periyapatna Doddakere to Kiranelli Doddakere in continuation of Navaloor feeder channel ;

(*b*) the amount estimated by them;

(*c*) any representation received from the villagers of Kiranelli during the tour of the Minister for Public Works in Periyapatna Taluk ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) Does not arise in view of reply to (*a*).

(*c*) Information is not available.

ಶ್ರೀ ಕಡಿದಾಳ್ ಮಂಜಪ್ಪ.—I want to correct the answer to (*c*). "Information is not available" ಎಂದಿದೆ ನಾನು ಅಲ್ಲಿಗೆ ಹೋಗಿದ್ದಾಗ ಅವರು urge ಮಾಡಿದರು.

ಶ್ರೀ ಎಸ್. ಎಂ. ಮರಿಯಪ್ಪ.—ರೆವೆನ್ಯೂ ಮಂತ್ರಿಗಳು ಅಲ್ಲಿಗೆ ಬಂದಿದ್ದಾಗ ನವಲೂರು ಕಟ್ಟುಕಾಲುವೆಯನ್ನು ಮುಂದುವರಿಸಿ ಕೀರಹಳ್ಳಿ ಕೆರೆಗೆ ಕಟ್ಟುಕಾಲುವೆ ಮಾಡಿಸಿಕೊಡುವುದಾಗಿ ವಾಗ್ದಾನ ಮಾಡಿದ್ದರಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನಾನು ಯಾವಾಗಲೂ ಹಾಗೆ ಹೇಳುವುದಿಲ್ಲ. ಪರಿಶೀಲನುತ್ತೇವೆಂದು ಹೇಳಿದ್ದೆ.

ಅಧ್ಯಕ್ಷರು.—ಇನ್ನುಮೇಲೆ ಆ ರೀತಿ ಪ್ರಶ್ನೆ ಕೇಳಬೇಡಿ.

ಶ್ರೀ ಎಸ್. ಎಂ. ಮರಿಯಪ್ಪ.—ತಾವು ಈಗಲಾದರೂ ಅದನ್ನು ಪರಿಶೀಲಿಸಿ ಒಂದು ಕಟ್ಟುಕಾಲುವೆ ಮಾಡಲು ಏರ್ಪಾಡು ಮಾಡುವಿರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದರ ಕೆಲಸ ಈ ವರ್ಷ ಪ್ರಾರಂಭವಾಗಿರಬೇಕು ಅಥವಾ ಆಗುವುದರಲ್ಲಿದೆ. ಅದಾದಮೇಲೆ, ಅಂದರೆ ನವಲೂರು ಕಟ್ಟುಕಾಲುವೆ ಮುಂದುವರಿಸಿದಮೇಲೆ, ತಾವು ಕೇಳುವ ಕಟ್ಟುಕಾಲುವೆ ಮಾಡುವುದನ್ನು ಪರಿಶೀಲನುತ್ತೇವೆ.

Land Improvement Loan Applications in Periyapatna Taluk.

Q.—383. **Sri S. M. MARIYAPPA** (Periyapatna).—

Will the Government be pleased to state :—

(*a*) the extent of takavi loans and other types of land improvement loans granted by Government to Periyapatna Taluk from the year 1949 up-to-date (yearwar information may be given) ;

(*b*) the number of loan applications received yearwar from 1949 up-to-date;

(*c*) The total amount granted ;

(*d*) The number of applications pending, yearwar ?